ಉದಯವಾಣಿ
ಜನಮನದ ಜೀವನಾಡಿ

# Sunday 20th January 2019

## Dr. Richard Stalin, D.P. Nagaraj Joint Secretary and RVCE Principal Dr. Subramanya were present in the workshop “Use of free software” organized by R.V. College of Engineering.

## ಮನುಷ್ಯನ ಮೇಲೆ ತಂತ್ರಾಂಶಗಳ ನಿಯಂತ್ರಣ




ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಉಚಿತ ತಂತ್ರಾಂಶ ಬಳಕೆ ಕುರಿತ ಕಾರ್ಯಾಗಾರದಲ್ಲಿ ಡಾ.ರಿಚರ್ಡ್ ಸ್ಟಾಲ್ಮನ್, ಡಿ.ಪಿ.ನಾಗರಾಜ್, ಡಾ.ಸುಬ್ರಹ್ಮಣ್ಯ ಇದ್ದರು.

ಕೆಂಗೇರಿ: ನಾವು ಬಳಸುತ್ತಿರುವ ಕಂಪ್ಯೂಟರ್ ತಂತ್ರಾಂಶಗಳು ನಮ್ಮನ್ನೇ ನಿಯಂತ್ರಿಸುತ್ತಿವೆ ಎಂದು ಜಿಎನ್‌ಯು ಪ್ರಾಜೆಕ್ಟ್ ಹಾಗೂ ಉಚಿತ ತತ್ರಾಂಶ ಫೌಂಡೇಷನ್ ಮುಖ್ಯಸ್ಥ ಡಾ.ರಿಚರ್ಡ್ ಸ್ಟಾಲ್ಮನ್ ಹೇಳಿದರು.

ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದಲ್ಲಿ ಫ್ರೀ ಸಾಫ್ಟ್ ವೇರ್ ಫೌಂಡೇಷನ್ ಆಪ್ ಇಂಡಿಯಾ ಹಮ್ಮಿಕೊಂಡಿದ್ದ ಉಚಿತ ತಂತ್ರಾಂಶ ಬಳಕೆ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿ, ನಾವು ಬಳಸುತ್ತಿರುವ ಕಂಪ್ಯೂಟರ್ ತತ್ರಾಂಶಗಳು ನಮ್ಮ ಖಾಸಗಿ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ನಮ್ಮ ಸ್ವಾತಂತ್ರ್ಯ ಕಸಿದುಕೊಂಡಿವೆ ಎಂದು ದೂರಿದರು.

ತಂತ್ರಜ್ಞಾನ ಆವಿಷ್ಕಾರಗಳು ಪ್ರತಿಯೊಬ್ಬರಿಗೂ ತಲುಪಿ ಉಪಯೋಗವಾದಾಗ ಮಾತ್ರ ಸಂಶೋಧನೆಗಳಿಗೆ ಮಹತ್ವ ಸಿಗುತ್ತದೆ. ಶಾಲೆ, ಕಾಲೇಜುಗಳಲ್ಲಿ ಉಚಿತ ತತ್ರಾಂಶಗಳ ಬಳಕೆಗೆ ವಿಧ್ಯಾರ್ಥಿಗಳ ಗುಂಪು ರಚಿಸಿ, ಜಾಗೃತಿ ಮೂಡಿಸುವ ಮೂಲಕ ಅದರ ಲಾಭ ಪಡೆಯುವಂತೆ ಪ್ರೇರೇಪಿಸಬೇಕು ಎಂದರು.

ರಾಷ್ಟ್ರೀಯ ಶಿಕ್ಷಣ ಸೇವಾ ಸಮಿತಿ ಟ್ರಸ್ಟ್ ಸಹ ಕಾರ್ಯದರ್ಶಿ ಡಿ.ಪಿ.ನಾಗರಾಜ್, ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದ ಪ್ರಿನ್ಸಿಪಾಲ್ ಡಾ.ಸುಬ್ರಹ್ಮಣ್ಯ, ಬಿ.ರೇಣುಕಾಪ್ರಸಾದ, ಪ್ರೊ.ಕೆ.ದೀಪಿಕಾ ಹೇಮಂತ್ ಪಾಲ್ಗೊಂಡಿದ್ದರು.